## ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/2340/2021
ಮಂಡನಾಧಿಕಾರಿಗಳ ಶಾಖೆ, ಎಆರ್ಇ-18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 07/03/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: (1) ಶ್ರೀ ಎನ್. ರೇವಣಸಿದ್ದಪ್ಪ ಬಿನ್ ಭರಮನ ಗೌಡ, ರೇಷ್ಮೆ ಪ್ರವರ್ತಕರು, ತಾಂತ್ರಿಕ ಸೇವಾ ಕೇಂದ್ರ, ಹರಪನಹಳ್ಳಿ, (2) ಶ್ರೀ ಜಗದೀಶ್ ಎಂ.ಜಿ ಬಿನ್ ಎಂ. ಗುರುಬಸಪ್ಪ, ರೇಷ್ಮೆ ಸಹಾಯಕ ನಿರ್ದೇಶಕರು, ಉಪನಿರ್ದೇಶಕರ ಕಛೇರಿ, ರೇಷ್ಮೆ ಇಲಾಖೆ, ದಾವಣಗೆರೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

1) ಮಂಡ್ಯ ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ (1) ಶ್ರೀ ಎನ್. ರೇವಣಸಿದ್ದಪ್ಪ ಬಿನ್ ಭರಮನ ಗೌಡ, ರೇಷ್ಮೆ ಪ್ರವರ್ತಕರು, ತಾಂತ್ರಿಕ ಸೇವಾ ಕೇಂದ್ರ, ಹರಪನಹಳ್ಳಿ, (2) ಶ್ರೀ ಜಗದೀಶ್ ಎಂ.ಜಿ ಬಿನ್ ಎಂ. ಗುರುಬಸಪ್ಪ, ರೇಷ್ಮೆ ಸಹಾಯಕ ನಿರ್ದೇಶಕರು, ಉಪನಿರ್ದೇಶಕರ ಕಛೇರಿ, ರೇಷ್ಮೆ ಇಲಾಖೆ, ದಾವಣಗೆರೆ ಸರ್ಕಾರಿ/ಸಾರ್ವಜನಿಕ ನೌಕರಾಗಿರುತ್ತಾರೆ. (ಇನ್ನು ಮುಂದೆ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ). ಶ್ರೀ ಟಿ.ಆರ್. ಬಣಕಾರ್ ತಂದೆ ರೇವಣಸಿದ್ದಪ್ಪ ಕೆ, ವಾಸ: ಹುಣಿಸಿಕಟ್ಟೆ, ಅಣಜಿಗೆರೆಪೋಸ್ಟ್, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸ ಮಾಡಿಕೊಡಲು ಲಂಚದ ಹಣಕ್ಕೆ ಬೇಡಿಕೆ ಇಟ್ಟು ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2) <u>ಪ್ರಕರಣದ ಸಂಕ್ಷಿಪ್ತ ಸಾರಾಂಶ</u>:- ದೂರುದಾರರಿಗೆ ಅಣಜಿಗೆರೆ ಗ್ರಾಮದ ಸ.ನಂ. 50/ಹೆಚ್ ರಲ್ಲಿ ಅವರಿಗೆ ಸೇರಿದ 4 ಎಕರೆ 73 ಗುಂಟೆ ಜಮೀನು ಇದ್ದು ಅದರಲ್ಲಿ 2 1/2 ಎಕರೆಯಲ್ಲಿ ರೇಷ್ಮೆ ಹುಳಗಳ ಆಹಾರವಾದ ಹಿಪ್ಪೋ ನೇರಳೆ ಬೆಳೆಯನ್ನು ಮತ್ತು ರೇಷ್ಮೆ ಹುಳಗಳ ಸಾಕಾಣಿಕೆಗೆ 23 X 63 ಅಡಿ ಉದ್ದಗಲದ ಬಿದಿರಿನ ಬಂಬಿನಿಂದ ಶೆಡ್ ಮಾಡಿಕೊಂಡಿರುತ್ತಾರೆ. 2015 ರಲ್ಲಿ ಹುಳು ಸಾಕಾಣಿಕೆಗೆ ಪ್ಲಾಸ್ಟಿಕ್ ಚಂದ್ರಿಕೆಗಳನ್ನು 29,000/- ರೂ.ಗೆ 400 ಚಂದ್ರಿಕೆಗಳನ್ನು ಖರೀದಿಸಿದ್ದು ಅದಕ್ಕೆ ಸರ್ಕಾರದಿಂದ 18,750/- ರೂ. ಸಹಾಯಧನ ಹಾಗೂ ಶೆಡ್‌ಗೆ 27,000/- ರೂ. ಸಹಾಯಧನ ಬರುತ್ತದೆ. ಅದರಲ್ಲಿ ಚಂದ್ರಿಕೆಗಳಿಗೆ ಈಗಾಗಲೇ 16,100/- ರೂ. ಸಹಾಯಧನವು ಮಂಜೂರಾಗಿದ್ದು ಆ ಹಣದ ಚೆಕ್ ಕೊಡಲು ರೇಷ್ಮೆ ಇಲಾಖೆಯ ಗಡಿಗುಡಾಳ್ ಸರ್ಕಲ್ ನ ರೇಂಜ್ ಆಫೀಸರ್ ಆದ 1ನೇ ಎದುರುದಾರರು ತಮ್ಮ ಮೊಬೈಲ್ ನಂ. 9945708893 ನಿಂದ ದೂರುದಾರರ ಮೊಬೈಲ್ ನಂ. 9449602836 ಗೆ ದಿ:03/01/2017 ರಂದು ಸಾಯಂಕಾಲ ಕರೆ ಮಾಡಿ " ನೀನು 2015 ರಲ್ಲಿ ರೇಷ್ಮೆ ಹುಳುಗಳ ಸಾಕಾಣಿಕೆಗೆ ಸಲ್ಲಿಸಿದ ಅರ್ಜಿಯ ಬಗ್ಗೆ ಮತ್ತು ಸಹಾಯಧನದ ಬಗ್ಗೆ ಮಾತನಾಡಬೇಕು. ನಾಳೆ ದಿ: 04/01/2017 ರಂದು ದಾವಣಗೆರೆಗೆ ನಮ್ಮ ಸಹಾಯಕ ನಿರ್ದೇಶಕರ ಕಛೇರಿಗೆ ಬಾ" ಎಂದು ತಿಳಿಸಿದ್ದರಿಂದ ದೂರುದಾರರು ದಿ: 04/01/2017ರಂದು ಮಧ್ಯಾಹ್ನ 1-00 ಘಂಟೆಗೆ ಸಹಾಯಕ ನಿರ್ದೇಶಕರ ಕಛೇರಿಯಲ್ಲಿ 1ನೇ ಎದುರುದಾರರನ್ನು ಭೇಟಿ ಮಾಡಿದಾಗ 1ನೇ ಎದುರುದಾರರು ದೂರುದಾರರ ಕೆಲಸ ಮಾಡಿಸಿಕೊಡುತ್ತೇನೆ, ಸಹಾಯಕ ನಿರ್ದೇಶಕರಾದ 2ನೇ ಎದುರುದಾರರಿಗೆ ಮತ್ತು ತನಗೆ ಸೇರಿ 4,000/- ರೂ. ಲಂಚದ ಹಣ ಕೊಡಬೇಕೆಂದು ಕೇಳಿರುತ್ತಾರೆ. ಅದಕ್ಕೆ ದೂರುದಾರರು ಕಡಿಮೆ ಮಾಡಿಕೊಳ್ಳಿ ಎಂದಿದ್ದಕ್ಕೆ ಫೈನಲ್ ಆಗಿ 3,500/- ರೂ. ಕೊಡಬೇಕೆಂದು ಕೇಳಿರುತ್ತಾರೆ. ಈ ಮಾತುಕತೆಯು 2ನೇ ಎದುರುದಾರರ ಮುಂದೆ ನಡೆದಿದ್ದು ಅದಕ್ಕೆ 2ನೇ ಎದುರುದಾರರು ದೂರುದಾರರನ್ನು ಕುರಿತು ನೂರಾರು ರೈತರಿಗೆ ಹೇಳೋಕೆ ಆಗಲ್ಲ, ರೇಂಜ್ ಆಫೀಸರ್ ಜೊತೆ ಮಾತಾಡಿಕೊಳ್ಳಿ ಎಂದು ನಾನು ಅವರಿಗೆ ಹೇಳಿದ್ದೇನೆ ಎಂದು ತಿಳಿಸಿದ್ದರಿಂದ ದೂರುದಾರರು ಹಣದ ವ್ಯವಸ್ಥೆ ಮಾಡಿಕೊಳ್ಳುತ್ತೇನೆಂದು ಹೇಳಿ ಕಛೇರಿಯಿಂದ ಹೊರ ಬಂದಿರುತ್ತಾರೆ. ದೂರುದಾರರು ದಿ: 04/01/2017 ರಂದು ದಾವಣಗೆರೆ ರೇಷ್ಮೆ ಇಲಾಖೆ ಕಛೇರಿಯಲ್ಲಿ 1 ಮತ್ತು 2ನೇ ಎದುರುದಾರರ ಸಂಭಾಷಣೆಗಳನ್ನು ತನ್ನ ಮೊಬೈಲ್‌ನಲ್ಲಿ ವಾಯ್ಸ್ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

3) ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 05/01/2017 ರಂದು ಸಾಯಂಕಾಲ 5-20 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ದಾವಣಗೆರೆ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದಾಗ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 02/2017 ಪಿ.ಸಿ. ಕಾಯಿದೆ ಕಲಂ 7 ರಡಿ 1 ಮತ್ತು 2ನೇ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

4) ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ಎಂ.ದೇವರಾಜ ತಂದೆ ಲೇಟ್ ಮಲ್ಲಿಕಾರ್ಜುನ್ ಮತ್ತು ಶ್ರೀ ಹೆಚ್ ಬಿ ಮೋಹನ ತಂದೆ ಹೆಚ್.ಬಿ ಬಸವರಾಜ್ ಇವರನ್ನು ಬರಮಾಡಿಕೊಂಡಿದ್ದು, ಅವರುಗಳ ಪರಿಚಯಮಾಡಿಕೊಂಡು ದೂರುದಾರರನ್ನು ಪರಿಚಯಿಸಿ ಪ್ರಥಮ ವರ್ತಮಾನ ವರದಿಯನ್ನು ತೋರಿಸಿ ದೂರಿನ ಸಾರಾಂಶವನ್ನು ವಿವರಿಸಿದಾಗ ಎದುರುದಾರರು ಲಂಚಕ್ಕಾಗಿ ಬೇಡಿಕೆಯಿಟ್ಟಿದ್ದು, ಕಂಡುಬಂದಿರುತ್ತದೆ. ನಂತರ ತನಿಖಾಧಿಕಾರಿಯವರು ದೂರುದಾರರು ಮತ್ತು 1 ಮತ್ತು 2ನೇ ಎದುರುದಾರರ ನಡುವೆ ನಡೆದ ಲಂಚದ ಸಂಭಾಷಣೆಗಳು ದಾಖಲಾಗಿರುವ ಮೊಬೈಲ್ ರೆಕಾರ್ಡನಲ್ಲಿರುವ ಸಂಭಾಷಣೆಗಳನ್ನು ಪಂಚರಿಗೆ ಕೇಳಿಸಿ ಕಂಪ್ಯೂಟರ್ ಮುಖಾಂತರ ಸಿಡಿಗೆ ವರ್ಗಾಯಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರ ಸೂಚನೆ ಮೇರೆಗೆ ದೂರುದಾರರು 1 ಮತ್ತು 2ನೇ ಎದುರುದಾರರಿಗೆ ಲಂಚವಾಗಿ ಕೊಡಬೇಕಾಗಿರುವ ರೂ. 500 ಮುಖಬೆಲೆಯ 6 ನೋಟುಗಳು, ರೂ. 100 ಮುಖಬೆಲೆಯ 3 ನೋಟುಗಳು ಹಾಗೂ ರೂ. 50 ಮುಖಬೆಲೆಯ 4 ನೋಟುಗಳು ಒಟ್ಟು ರೂ. 3,500/- ಗಳನ್ನು ಹಾಜರಪಡಿಸಿದಾಗ ಪಂಚರು ಅವುಗಳನ್ನು ಪರಿಶೀಲಿಸಿ ಮೌಲ್ಯ ಮತ್ತು ಕ್ರಮಸಂಖ್ಯೆಗಳನ್ನು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಳ್ಳುವಂತೆ ತಿಳಿಸಿದ ಪ್ರಕಾರ ಪಂಚರು ಮೌಲ್ಯ ಮತ್ತು ಕ್ರಮ ಸಂಖ್ಯೆಯನ್ನು ಬರೆದುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳ ಸೂಚನೆ ಮೇರೆಗೆ ಸಿಬ್ಬಂದಿಯವರು ದೂರುದಾರರು ಹಾಜರುಪಡಿಸಿದ ನೋಟುಗಳಿಗೆ ಫಿನ್ತಾಪಲಿನ್ ಪುಡಿಯನ್ನು ಸವರಿಸಿರುತ್ತಾರೆ. ಆ ನಂತರ ಪಂಚ-2 ರವರು ತನಿಖಾಧಿಕಾರಿಯವರ ಸೂಚನೆಯಂತೆ ಫಿರ್ಯಾದಿಯು ಹಾಜರಪಡಿಸಿದ್ದ ಫಿನಾಪ್ತಲಿನ್ ಪುಡಿಯನ್ನು ಸವರಿದ ನೋಟುಗಳನ್ನು ತಮ್ಮ ಬಲಗೈಯಿಂದ ತೆಗೆದುಕೊಂಡು ಎರಡು ಕೈಗಳಿಂದ ಎಣಿಸಿ ತನಿಖಾಧಿಕಾರಿಯವರ ಟೇಬಲ್ ಮೇಲೆ ಇಟ್ಟಿರುತ್ತಾರೆ. ತನಿಖಾಧಿಕಾರಿಯವರ ಸೂಚನೆಯಂತೆ ಪಂಚ-2 ರವರ ಎರಡು ಕೈಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆ ಆಗಿರುತ್ತದೆ. ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚ-2 ರವರು

ದೂರುದಾರರ ಅಂಗ ಶೋಧನೆಯನ್ನು ಮಾಡಿದಾಗ ಅವರ ಶರ್ಟಿನ ಮೇಲ್ಭಾಗದ ಎದೆಯ ಎಡಜೇಬಿನಲ್ಲಿ ಒಂದು ಮೊಬೈಲ್ ಹೊರತು ಪಡಿಸಿ ಏನು ಇರದಿರುವುದನ್ನು ಖಚಿತಪಡಿಸಿಕೊಂಡ ನಂತರ ಪಂಚ-2 ರವರು ಫಿನಾಪ್ತಲಿನ್ ಪುಡಿಯನ್ನು ಸವರಿದ ರೂ. 3,500/- ಗಳನ್ನು ದೂರುದಾರರು ಧರಿಸಿದ್ದ ಶರ್ಟಿನ ಮೇಲ್ಭಾಗದ ಜೇಬಿನ ಒಳಗೆ ಇರಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ಅಲ್ಲಿಗೆ ಹೋದಾಗ ತಮ್ಮ ಬಳಿ ಇದ್ದ ಮೊಬೈಲ್‌ನಲ್ಲಿರುವ ವಾಯ್ಸ್ ರೆಕಾರ್ಡರನ್ನು ಆನ್ ಮಾಡಿಕೊಂಡು ಹೋಗುವಂತೆ ನಂತರ ಎದುರುದಾರರನ್ನು ಬೇಟಿಯಾಗಿ ತಮ್ಮ ಕೆಲಸವನ್ನು ಮಾಡಿಕೊಡುವಂತೆ ಕೇಳಿಕೊಳ್ಳುವುದು ಮತ್ತು 1 ಮತ್ತು 2ನೇ ಎದುರುದಾರರು ಲಂಚದ ಹಣ ಕೇಳಿದರೆ ಫಿನಾಪ್ತಲಿನ್ ಲೇಪಿತ ಹಣವನ್ನು 1 ಮತ್ತು 2ನೇ ಎದರುದಾರರಿಗೆ ಕೊಡುವುದು ಅಥವಾ 1 ಮತ್ತು 2ನೇ ಎದುರುದಾರರು ಹೇಳಿದವರಿಗೆ ಕೊಟ್ಟು ಹೊರಗಡೆ ಬಂದು ಕೆನ್ನೆ ಸವರಿಕೊಳ್ಳುವ ಮೂಲಕ ಸಂಜ್ಞೆಯನ್ನು ನೀಡುವಂತೆ ತಿಳಿಸಿರುತ್ತಾರೆ. ನೆರಳು ಸಾಕ್ಷಿಯಾದ ಪಂಚ-2 ರವರಿಗೆ ದೂರುದಾರರ ಜೊತೆ ಹೋಗಿ ಸಾಧ್ಯವಾದಷ್ಟು ಹತ್ತಿರ ಹೋಗಿ ಅಲ್ಲಿ ಏನು ನಡೆಯುತ್ತದೆ ಎಂಬುದನ್ನು ಗಮನಿಸಿ ನಂತರ ತಮಗೆ ತಿಳಿಸುವಂತೆ ಹೇಳಿರುತ್ತಾರೆ. ನಂತರ ಫಿನಾಪ್ತಲಿನ್ ಪುಡಿಯನ್ನು ಮುಟ್ಟಿದವರು ಸಿಬ್ಬಂದಿಯವರೆಲ್ಲರು ತಮ್ಮ ಕೈಬೆರಳುಗಳನ್ನು ಸೋಪ್ ಮತ್ತು ನೀರಿನಿಂದ ಶುಭ್ರವಾಗಿ ತೊಳೆದುಕೊಂಡಿರುತ್ತಾರೆ. ಈ ನಡಾವಳಿಯ ಎಲ್ಲ ವಿದ್ಯಾಮಾನಗಳನ್ನು ತಮ್ಮ ಸಿಬ್ಬಂದಿಯವರಿಂದ ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿರುತ್ತಾರೆ. ಪ್ರಾಯೋಗಿಕ ಪಂಚನಾಮೆಯನ್ನು ದಿ: 06-01-2017 ರಂದು ರಾತ್ರಿ 08.00 ಗಂಟೆಯಿಂದ ರಾತ್ರಿ 10.00 ಗಂಟೆಯವರೆಗೆ ದಾವಣಗೆರೆ ಎಸಿಬಿ ಕಛೇರಿಯ ಕಂಪ್ಯೂಟರ್‌ನಲ್ಲಿ ಗಣಕೀಕರಣ ಮಾಡಿಸಿ ಮಹಾಜರ್‌ನಲ್ಲಿ ದಾಖಲಿಸಿರುತ್ತಾರೆ.

5) ದಿನಾಂಕ 06/01/2017 ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ತನಿಖಾಧಿಕಾರಿಗಳು, ನೆರಳು ಸಾಕ್ಷಿ ಹಾಗೂ ಸಿಬ್ಬಂಧಿಯವರು ಒಂದು ಖಾಸಗಿ ಕ್ರೂಸರ್ ವಾಹನದಲ್ಲಿ ಮತ್ತೊಬ್ಬ ಪಂಚ ಸಾಕ್ಷಿ ಹಾಗೂ ಸಿಬ್ಬಂಧಿಯವರು ಠಾಣಾ ಜೀಪಿನಲ್ಲಿ ಹಾಗೂ ದೂರುದಾರರು ತಂದಿದ್ದ ಹೀರೋ ಸ್ಮಾರ್ಟ್ ಬೈಕ್‌ನಲ್ಲಿ ಠಾಣೆಯ ಒಬ್ಬ ಸಿಬ್ಬಂದಿಯವರೊಂದಿಗೆ ಮತ್ತು ಪಿ.ಸಿ. ಕಲ್ಲೇಶಪ್ಪರವರು ತನ್ನ ಸ್ನೇಹಿತರ ಬೈಕ್‌ನಲ್ಲಿ ಹೊರಟು ದಾವಣಗೆರೆ ಹೊರವಲಯಕ್ಕೆ ಬಂದಾಗ ದೂರುದಾರರು 1ನೇ ಎದುರುದಾರರಿಗೆ ತಮ್ಮ ಮೊಬೈಲ್‌ನಿಂದ ಕರೆ ಮಾಡಿದಾಗ 1 ನೇ ಎದುರುದಾರರು ಹರಪ್ಪನಹಳ್ಳಿ ಪಟ್ಟಣದ ರೇಷ್ಮೆ ಇಲಾಖೆಯ ತಾಂತ್ರಿಕ ಸೇವಾ ಕೇಂದ್ರಕ್ಕೆ ಬರಲು ತಿಳಿದಂತೆ

ಎಲ್ಲರೂ ಹರಪ್ಪನಹಳ್ಳಿ ಪಟ್ಟಣಕ್ಕೆ ಬಂದು ಕಛೇರಿಯ ಸಮೀಪ ಹೋದಾಗ ತನಿಖಾಧಿಕಾರಿಗಳು ದೂರುದಾರರು ಮತ್ತು ನೆರಳು ಸಾಕ್ಷಿಯಾದ ಹೆಚ್. ಬಿ. ಮೋಹನ್ ರವರಿಗೆ 1 ಮತ್ತು 2ನೇ ಎದುರುದ್ದಾರರನ್ನು ಭೇಟಿಯಾಗಲು ಕಳುಹಿಸಿಕೊಟ್ಟಿರುತ್ತಾರೆ. ಅವರಿಬ್ಬರೂ ಕಛೇರಿಯ ಒಳಗೆ ಹೋದಾಗ 1ನೇ ಎದುರುದಾರರು ತಮ್ಮ ಕಛೇರಿಯಲ್ಲಿದ್ದುದನ್ನು ನೋಡಿ ದೂರುದಾರರು 1ನೇ ಎದುರುದಾರರಿಗೆ ಸಾರ್ ನೀವು ಕೇಳೀದ್ದೀರಲ್ಲ ದುಡ್ಡಿಂದು ಹೆಂಗ್ ಮಾಡೋಣ ಅಂತ ಅಂದಾಗ 1ನೇ ಎದುರುದಾರರು ದೂರುದಾರರಿಗೆ ಬನ್ನಿ ಅಂತ ಕಛೇರಿಯ ಹೊರಗೆ ಮುಖ್ಯ ದ್ವಾರದ ಮುಂಭಾಗ ಕರೆದುಕೊಂಡು ಹೋಗಿ ಪರಸ್ಪರ ಮಾತನಾಡಿ ದೂರುದಾರರಿಂದ 3,500/- ರೂ. ಫಿನಾಫ್ತಲಿನ್ ಪೌಡರ್ ಲೇಪಿತ ಲಂಚದ ಹಣವನ್ನು ಸ್ವೀಕರಿಸಿ ಎಣಿಸಿಕೊಂಡು ಅವರ ಶರ್ಟಿನ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಈ ಘಟನೆಯು ನೆರಳು ಸಾಕ್ಷಿಯು ಕುಳಿತಿದ್ದ ಜಾಗದಿಂದ ಸುಮಾರು 5-6 ಅಡಿ ಅಂತರದಲ್ಲಿದ್ದು ಅವರಿಗೆ ಸ್ಪಷ್ಟವಾಗಿ ಗೋಚರಿಸಿರುತ್ತದೆ. ನಂತರ ದೂರುದಾರರಿಗೆ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನೀಡಿದ ಸೂಚನೆಯಂತೆ ಅವರು ತಮ್ಮ ಕೆನ್ನೆಯನ್ನು ಸವರಿಕೊಳ್ಳುವ ಮೂಲಕ ತನಿಖಾಧಿಕಾರಿಗಳಿಗೆ ನಿಗದಿತ ಸಿಗ್ನಲ್‌ನ್ನು ನೀಡಿರುತ್ತಾರೆ. ಆಗ ತನಿಖಾಧಿಕಾರಿಯವರು ಅಲ್ಲಿಗೆ ಬಂದು 1ನೇ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಯವರು 1ನೇ ಎದುರುದಾರರ ಬಲಗೈಯನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಅದೇ ರೀತಿ ಎದುರುದಾರರ ಎಡಗೈಯನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಗಳು 1ನೇ ಎದುರುದಾರರಿಗೆ ಲಂಚದ ಹಣವನ್ನು ಹಾಜರುಪಡಿಸಲು ಹೇಳಿದಾಗ ಅವರು ತಮ್ಮ ಶರ್ಟ್ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿ ತಮ್ಮ ಜೇಬಿನಲ್ಲಿದ್ದ ಲಂಚದ ಹಣವನ್ನು ಹಾಜರುಪಡಿಸಿದ್ದನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು 1ನೇ ಎದುರುದಾರರಿಗೆ ಬದಲೀ ಶರ್ಟಿನ ವ್ಯವಸ್ಥೆ ಮಾಡಿ ಅವರ ಶರ್ಟಿನ ಜೇಬಿನ ಒಳ ಭಾಗವನ್ನು ಹೊರಮುಖ ಮಾಡಿ ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಯವರು 1ನೇ ಎದುರುದಾರರಿಗೆ ಸ್ವರಕ್ಷಣಾ ಪತ್ರ ಬರೆದುಕೊಡುವಂತೆ ತಿಳಿಸಿದಾಗ ಅವರು ತಮ್ಮ ಸ್ವರಕ್ಷಣಾ ಸಮಜಾಯಿಷಿಯಲ್ಲಿ "ಹಣ ಬೇಡವೆಂದರೂ ಬೇಕಾಗಿ 3,500/- ರೂ.ಗಳನ್ನು ಕೊಟ್ಟು 2ನೇ ಎದುರುದಾರರಿಗೆ ಫೋನ್ ಮಾಡಿ ಹೇಳಿರಿ ಎಂದು

ಬೇಗನೆ ಪ್ಲಾಸ್ಟಿಕ್ ಚಂದ್ರಿಕೆ 300 ಶೆಡ್ 5 × 21=1197 ಚದುರ ಅಡಿಗೆ ಗುಡಿಸಲು ಸಬ್‌ಸಿಡಿ ತರಿಸಿಕೊಡಿರಿ ಎಂದು ಹೇಳಿದರು. 2ನೇ ಎದುರುದಾರರು ಹೇಳಿದ್ದಕ್ಕೆ ನಾನು ಹಣ ತೆಗೆದುಕೊಂಡೆ" ಎಂದು ಬರೆದುಕೊಟ್ಟಿದ್ದನ್ನು ದೂರುದಾರರು ಹಾಗೂ ನೆರಳು ಸಾಕ್ಷಿರವರು ಅವರ ಸಮಜಾಯಿಷಿಯನ್ನು ಅಲ್ಲಗಳೆದು 1ನೇ ಎದುರುದಾರರು ದೂರುದಾರರಿಂದ ಹಣವನ್ನು ಕೇಳಿ ಪಡೆದುಕೊಂಡಿರುತ್ತಾರೆಂದು ಹೇಳಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ರೆಕಾರ್ಡ್ ಮಾಡಿಕೊಳ್ಳಲು ಹೇಳಿದ್ದ ವಾಯ್ಸ್ ರೆಕಾರ್ಡರನಲ್ಲಿದ್ದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ ಲ್ಯಾಪ್ ಟಾಪ್ ಮೂಲಕ ಸಂಭಾಷಣೆಗಳನ್ನು ಒಂದು ಸಿ.ಡಿ.ಗೆ ವರ್ಗಾಯಿಸಿ ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ. ದಿನಾಂಕ 06/01/2017 ರಂದು ಹರಪ್ಪನಹಳ್ಳಿ ಪಟ್ಟಣದ ರೇಷ್ಮೆ ಇಲಾಖೆಯ ತಾಂತ್ರಿಕ ಸೇವಾ ಕೇಂದ್ರದಲ್ಲಿ ಟ್ರಾಪ್ ಪಂಚನಾಮೆ ಮುಗಿದ ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಸಂಜೆ 6-30 ಘಂಟೆಗೆ ದಾವಣಗೆರೆ ನಗರಕ್ಕೆ ಬಂದು, ನಗರದ ರೇಷ್ಮೆ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಕಛೇರಿಗೆ ಬಂದಾಗ ಕಛೇರಿಯಲ್ಲಿನ ಸಹಾಯಕ ನಿರ್ದೇಶಕರಾದ 2ನೇ ಎದುರುದಾರರು ತಮ್ಮ ಛೇಂಬರಿಗೆ ಹೋಗಿ ತನಿಖಾಧಿಕಾರಿಗಳು ತಮ್ಮ ಗುರುತಿನ ಚೀಟಿಯನ್ನು ತೋರಿಸಿ 1 ನೇ ಎದುರುದಾರರು ಗಡಿಗುಡಾರ ಸರ್ಕಲ್ ಸಂಖ್ಯಾತರಿಕ್ತ ರೇಷ್ಮೆ ಪ್ರವರ್ತಕರು ದೂರುದಾರರಿಂದ ರೂ. 3,500/- ಲಂಚದ ಹಣವನ್ನು ಹರಪನಹಳ್ಳಿಯ ರೇಷ್ಮೆ ತಾಂತ್ರಿಕ ಸೇವಾ ಕೇಂದ್ರದಲ್ಲಿ ಸ್ವೀಕರಿಸುವಾಗ ಟ್ರಾಪ್ ಆಗಿರುತ್ತದೆ ಎಂದು ತಿಳಿಸಿರುತ್ತಾರೆ ಮತ್ತು 1ನೇ ಎದುರುದಾರರು ನೀಡಿದ ಸ್ವರಕ್ಷಣಾ ಸಮಜಾಯಿಷಿಯನ್ನು 2 ನೇ ಎದುರುದಾರರಿಗೆ ತೋರಿಸಿರುತ್ತಾರೆ. ದೂರುದಾರರು 1ನೇ ಎದುರುದಾರರು ಮತ್ತು ನೀವು ಅವರಿಗೆ ರೇಷ್ಮೆ ಹುಳು ಸಾಕಾಣಿಕೆಗೆ ಸರ್ಕಾರದ ಸಹಾಯಧನ ಮಂಜೂರಾತಿಗಾಗಿ ಲಂಚದ ಹಣ ಬೇಡಿಕೆ ಮಾಡಿದ ಸಂಭಾಷಣೆಯು ದೂರುದಾರರ ವಾಯ್ಸ್ ರೆಕಾರ್ಡರ್‌ನಲ್ಲಿ ರೆಕಾರ್ಡ್ ಆಗಿರುತ್ತದೆ. ಹಾಗಾಗಿ 2ನೇ ಎದುರುದಾರರು ಸಹ ಈ ಪ್ರಕರಣದಲ್ಲಿ ಆಪಾದಿತರಾಗಿರುತ್ತೀರಿ ಎಂದು ತಿಳಿಸಿ ದಸ್ತಗಿರಿ ಮಾಡಿರುತ್ತಾರೆ. ನಂತರ ತನಿಖಾಧಿಕಾರಿಗಳು 2ನೇ ಎದುರುದಾರರಿಗೆ ಸಮಜಾಯಿಷಿಯನ್ನು ಬರದುಕೊಡಲು ತಿಳಿಸಿದ ಪ್ರಕಾರ ಅವರು ತಮ್ಮ ಸಮಜಾಯಿಷಿಯಲ್ಲಿ "1ನೇ ಎದುರುದಾರರು ರೈತರಿಂದ ಹಣ ವಸೂಲಿ ಮಾಡುವ ಬಗ್ಗೆ ಹಲವಾರು ಬಾರಿ ಮೌಖಿಕವಾಗಿಯೂ ಸಹ ರೈತರು ತಿಳಿಸಿರುತ್ತಾರೆ. ಹಾಗಾಗಿ ಅವರಿಗೆ ಈ ರೀತಿಯ ಪ್ರವೃತ್ತಿ ಬಿಡುವಂತೆ ತಿಳಿಸಿದರೂ ಸಹ ಅವರು ತಮ್ಮ ಪ್ರವೃತ್ತಿ ಮುಂದುವರೆಸಿ ಸಿಕ್ಕಿ ಬಿದ್ದಿದ್ದಾರೆ. ಅದಕ್ಕೆ ಅವರೇ ನೇರ ಹೊಣೆಗಾರರಾಗಿರುತ್ತಾರೆ. ಇದರಲ್ಲಿ ನನ್ನದಾಗಲೀ ಅಥವಾ ರೇಷ್ಮೆ

ಉಪನಿರ್ದೇಶಕರವರದ್ದಾಗಲೀ ಅಥವಾ ಇತರೇ ಸಿಬ್ಬಂದಿಗಳಾಗಲೀ ಭಾಗಿಯಾಗಿರುವುದಿಲ್ಲ. ಆದ್ದರಿಂದ ನನ್ನದೇನೂ ಪಾತ್ರ ಅಥವಾ ತಪ್ಪು ಆಗಿರುವುದಿಲ್ಲ. ನಾನು ಯಾವುದೇ ರೀತಿಯ ಲಂಚದ ಹಣ ಸ್ವೀಕರಿಸಿರುವುದಿಲ್ಲ. 1ನೇ ಎದುರುದಾರರು ಖಿನ್ನತೆ ಹಾಗೂ ಒತ್ತಡದಿಂದ ಈ ರೀತಿಯ ಹೇಳಿಕೆ ನೀಡಿರುತ್ತಾರೆ" ಎಂದು ಬರೆದುಕೊಟ್ಟ ಸಮಜಾಯಿಷಿಯ ಮೇಲೆ ಪಂಚರು ಸಹಿ ಮಾಡಿದ ನಂತರ ತನಿಖಾಧಿಕಾರಿಗಳು ತಾನೂ ಸಹ ಸಹಿ ಮಾಡಿ ದೂರುದಾರರಿಗೆ ವಿಚಾರಿಸಿದಾಗ ಅವರು 2ನೇ ಎದುರುದಾರರು ಹಣ ಕೇಳಿರುವುದು ಸತ್ಯವಾಗಿರುತ್ತದೆ. ಈ ಬಗ್ಗೆ ದಿ: 04/01/2017 ರಂದು ಎ.ಡಿ.ಎಸ್. ರವರ ಕಛೇರಿಯಲ್ಲಿ ವಾಯ್ಸ್ ರೆಕಾರ್ಡ್ ಮಾಡಿಕೊಂಡಿರುವುದಾಗಿ ಹಾಗೂ ಹರಪನಹಳ್ಳಿಯಲ್ಲಿ ಈಗ್ಗೆ ಅಂದಾಜು ಒಂದುವರೆ ತಿಂಗಳ ಹಿಂದೆ ರೇಷ್ಮೆ ಬೆಳೆಗಾರರ ಸಭೆಯನ್ನು ರೇಷ್ಮೆ ಕಛೇರಿಯಲ್ಲಿ ಕರೆದ ಸಮಯದಲ್ಲಿ ನಾವು ನಿಮ್ಮ ರೇಷ್ಮೆ ಕೃಷಿ ಸಲಕರಣೆಗಳ ಬಿಲ್ ಹಾಗೂ ಶೆಡ್‌ಗಳ ಸಹಾಯಧನವನ್ನು ರೇಷ್ಮೆ ಕಮೀಷನರ್ ಆಫೀಸಿನಿಂದ ತರಿಸಿಕೊಡುತ್ತೇವೆ ಅದಕ್ಕೆ ದುಡ್ಡು ಖರ್ಚಾಗುತ್ತದೆ, ನೀವು ಕೊಡಬೇಕಾಗುತ್ತದೆ ಎಂದು ತಿಳಿಸಿರುತ್ತೀರಿ ಎಂದು ಹೇಳಿರುತ್ತಾರೆ. ಹಾಗಾಗಿ 1 ಮತ್ತು 2ನೇ ಎದುರುದಾರರು ನೀಡಿದ ಸಮಜಾಯಿಷಿಗಳನ್ನು ಒಪ್ಪಲು ಬರಲಾರದು.

6) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

7) ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮುದ್ರಿತ ಧ್ವನಿಯು ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ದೃಡಪಟ್ಟಿರುತ್ತದೆ. ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಇರುವುದು ದೃಡಪಟ್ಟಿರುತ್ತದೆ.

8) ನಂತರ 1 ಮತ್ತು 2ನೇ ಎದುರುದಾರರಿಂದ ಸದರಿ ಆರೋಪಗಳಿಗೆ ಸಂಬಂದಿಸಿದಂತೆ, ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ ಅವರಿಂದ ಸಮಜಾಯಿಷಿಯನ್ನು ಕೇಳಲಾಯಿತು. 1ನೇ ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿ: 13-10-2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ 1ನೇ ಎದುರುದಾರರು ದೂರುದಾರರು ತಮ್ಮ ವಿರುದ್ದ ಸುಳ್ಳು ಆಪಾದನೆ ಮಾಡಿ ದೂರನ್ನು ನೀಡಿರುತ್ತಾರೆ ಎಂದು ಹೇಳಿ ಆಪಾದನೆಗಳನ್ನು ನಿರಾಕರಿಸುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಅದೇ ರೀತಿ 2ನೇ ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿ: 11-10-2021 ರಂದು ಸಲ್ಲಿಸಿರುತ್ತಾರೆ. 2ನೇ ಎದುರುದಾರರು

ತಮ್ಮ ಸಮಜಾಯಿಷಿಯಲ್ಲಿ "ದೂರುದಾರರು ಪ್ರಸ್ಥಾವನೆಗಳನ್ನು ಸರಿಯಾಗಿ ಸಲ್ಲಿಸದೇ ತಮ್ಮ ಮೇಲೆ ಉದ್ದೇಶಪೂರ್ವಕವಾಗಿ ದ್ವೇಶ ಸಾಧಿಸಿರುತ್ತಾರೆ. ದೂರುದಾರರು ದೂರು ನೀಡಿದ ದಿನಾಂಕದವರೆಗೆ ಯಾವುದೇ ಷೆಡ್ ಹಾಗೂ ಚಂದ್ರಿಕೆಗಳ ಚೆಕ್ ಬಂದಿರುವುದಿಲ್ಲ. ದೂರುದಾರರು ಸುಳ್ಳು ದೂರನ್ನು ನೀಡಿರುತ್ತಾರೆ. ತಾನು ದೂರುದಾರರಿಗೆ ಲಂಚ ನೀಡುವಂತೆ ಒತ್ತಾಯಿಸಿರುವುದಿಲ್ಲ. ದೂರುದಾರರು ಮಾಡಿರುವ ಆರೋಪಗಳು ಸುಳ್ಳಾಗಿರುತ್ತವೆಂದು" ಹೇಳಿ ಆಪಾದನೆಗಳನ್ನು ಅಲ್ಲಗಳೆಯುವುದರ ಹೊರತಾಗಿ ಅದಕ್ಕೆ ಪೂರಕವಾದ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದದರಿಂದ 1 ಮತ್ತು 2ನೇ ಎದುರುದಾರರು ನೀಡಿರುವ ಸಮಜಾಯಿಷಿಯ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

9) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳೂ ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ದೂರುದಾರರು ದಾವಣಗೆರೆ ಜಿಲ್ಲೆ ಅಣಜಿಗೆರೆ ಗ್ರಾಮದ ಸರ್ವೆ ನಂ-50/ಹೆಚ್ ರಲ್ಲಿ ತಮ್ಮ ಬಾಬ್ತು 2 1/2 ಎಕರೆ ಜಮೀನಿನಲ್ಲಿ ರೇಷ್ಮೆ ಹುಳು ಸಾಕಾಣಿಕೆಗೆ 23 X 63 ಅಡಿ ಉದ್ದಗಲದ ಬಿದಿರಿನ ಶೆಡ್ ನಿರ್ಮಾಣ ಮತ್ತು ಹುಳುಗಳಿಗೆ ಆಹಾರವಾಗಿ ಹಿಪ್ಪು ನೆರಳೆ ಬೆಳೆಯನ್ನು ಬೆಳೆದಿದ್ದು, ಹುಳು ಸಾಕಾಣಿಕೆಗಾಗಿ 2015 ರಂದು ದೂರುದಾರರು ಖರೀದಿಸಿದ್ದ, 400 ಚಂದ್ರಿಕೆಗಳಿಗೆ ರೂ. 16,100/- ಗಳ ಸಹಾಯ ಧನವು ಸರ್ಕಾರದಿಂದ ಮಂಜೂರಾಗಿದ್ದು, ಅದರ ಚೆಕ್ ಕೊಡಲು 1ನೇ ಎದುರುದಾರರು ದೂರುದಾರರಿಗೆ 2015 ರ ರೇಷ್ಮೆ ಹುಳು ಸಾಕಾಣಿಕೆಗೆ ಸಲ್ಲಿಸಿದ್ದ, ಸಹಾಯಧನದ ಅರ್ಜಿಯ ಬಗ್ಗೆ ಮಾತನಾಡಬೇಕು ಎಂದು ದಿ: 04-01-2017 ರಂದು ಮಧ್ಯಾಹ್ನ 2ನೇ ಎದುರುದಾರರ ಕಛೇರಿಗೆ ಕರೆಯಿಸಿಕೊಂಡು 1 ಮತ್ತು 2ನೇ ಎದುರುದಾರರು ನಿಮ್ಮ ಕೆಲಸ ಮಾಡಿಕೊಡುತ್ತೇವೆ. ಅದಕ್ಕೆ ರೂ. 3,500/- ಗಳನ್ನು ಕೊಡಬೇಕು ಎಂದು ಹೇಳಿ ದೂರುದಾರರಿಗೆ ಲಂಚದ ಹಣಕ್ಕೆ ಬೇಡಿಕೆಯಿಟ್ಟು ದಿ: 06-01-2017 ರಂದು 1ನೇ ಎದುರುದಾರರು ದೂರುದಾರರಿಂದ ಲಂಚದ ಹಣವಾದ ರೂ. 3,500/- ಗಳನ್ನು ಸ್ವೀಕರಿಸಿ ತಮ್ಮ ಕರ್ತವ್ಯದಲ್ಲಿ ನೀತಿ, ನಿಷ್ಠೆಯನ್ನು ಪಾಲಿಸದೆ ಕರ್ತವ್ಯದಲ್ಲಿ ಶ್ರದ್ಧೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 2021)ರ ನಿಯಮ

3(1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

10) ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ (1) ಶ್ರೀ ಎನ್. ರೇವಣಸಿದ್ದಪ್ಪ ಬಿನ್ ಭರಮನ ಗೌಡ, ರೇಷ್ಮೆ ಪ್ರವರ್ತಕರು, ತಾಂತ್ರಿಕ ಸೇವಾ ಕೇಂದ್ರ, ಹರಪನಹಳ್ಳಿ, (2) ಶ್ರೀ ಜಗದೀಶ್ ಎಂ.ಜಿ ಬಿನ್ ಎಂ. ಗುರುಬಸಪ್ಪ, ರೇಷ್ಮೆ ಸಹಾಯಕ ನಿರ್ದೇಶಕರು, ಉಪನಿರ್ದೇಶಕರ ಕಛೇರಿ, ರೇಷ್ಮೆ ಇಲಾಖೆ, ದಾವಣಗೆರೆ ಇವರುಗಳ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

11) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

7/3/22

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.